ನಾವು ಕ್ಷಮೆ ಕೇಳಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ನಾನು ಅವನನ್ನು ಸಂದರ್ಶನದಲ್ಲಿ ಆಯ್ಕೆ ಮಾಡಿ ಸೇರಿಸಿಕೊಂಡಿದ್ದರೂ, ಒಳಗೇ ಅಳುಕಿತ್ತು. ಆದರೆ ಈ ಹಿಂದಿನ ನನ್ನ ಆಯ್ಕೆಗಳ ಬಗ್ಗೆ ನನಗೆ ಯಾವತ್ತೂ ಹೆಮ್ಮೆ. ತಪ್ಪಾದ ಸಂದರ್ಭಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳವಾಗಿದ್ದವು. ಆದ್ದರಿಂದಲೇ ವೆಂಕಯ್ಯನ ವಿಷಯದಲ್ಲಿಯೂ ಅಷ್ಟೇ ಧೈರ್ಯದಿಂದಿದ್ದೆ.

ವೆಂಕಯ್ಯ ಪೂರ್ವ ಗೋದಾವರಿ ಜಿಲ್ಲೆಯವನು, ರಾಜಮಂಡ್ರಿಯ ಬಳಿಯ ಹಳ್ಳಿಯೊಂದರಿಂದ ಬಂದಿದ್ದ. ಅತ್ಯಂತ ಕಡುಬಡತನದ ಹಿನ್ನೆಲೆ ಅವನದಾಗಿತ್ತು. ಅವನ ತಂದೆ ಕುರಿಗಳನ್ನು ಸಾಕುವ ವೃತ್ತಿಯವರಾಗಿದ್ದರು. ಮನೆಯಲ್ಲಿ ಸಾಕಷ್ಟು ಮಕ್ಕಳಿದ್ದರೂ, ಬೇರೆ ಯಾರೂ ಓದಿನಲ್ಲಿ ಮುಂದುವರೆದಿರಲಿಲ್ಲ. ಎಲ್ಲಾ ಗಂಡು ಹುಡುಗರು ಏಳನೆಯ ತರಗತಿಯ ಮೆಟ್ಟಿಲು ಹತ್ತುವುದರಲ್ಲಿಯೇ ಸುಸ್ತಾಗಿ, ಶಾಲೆಗೆ ಕೈಮುಗಿದು, ಅಪ್ಪನ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದರು. ಹೆಣ್ಣು ಮಕ್ಕಳಿಗೆ ಹನ್ನೆರಡು ತುಂಬುವುದರಲ್ಲಿಯೇ ಮದುವೆ ಮಾಡಿಕೊಡಲಾಗಿತ್ತು. ಆದರೆ ಕೊನೆಯ ಮಗನಾದ ವೆಂಕಯ್ಯನಿಗೆ ಮಾತ್ರ ಅದು ಹೇಗೋ ವಿದ್ಯೆ ಹತ್ತಿತ್ತು. ಎಂಜಿನಿಯರಿಂಗ್ ಮಾಡಿ ಬೆಂಗಳೂರಿನಲ್ಲಿ ಉದ್ಯೋಗ ಸಂಪಾದಿಸಿಕೊಂಡಿದ್ದ.

ಪೆಪನಿಯಲ್ಲಿ ಕೆಲಸ ಮಾಡಿದ್ದ. ಅಲ್ಲಿ ವಿಪರೀತ ಜವಾಬ್ದಾರಿಯನ್ನು ಅವನ ಹೆಗಲ ಮೇಲೆ ಹೊರಿಸಲಾಗಿತ್ತು. ಆದರೆ ಸಂಬಳ ಮಾತ್ರ ಅದಕ್ಕೆ ತಕ್ಕಷ್ಟು ಅವರು ಕೊಡುತ್ತಿರಲಿಲ್ಲ. ಅಲ್ಲದೇ ವಿದೇಶಕ್ಕೆ ಕಳುಹಿಸಿ ಕೊಡುತ್ತೀವೆಂದು ಮೂಗಿಗೆ ತುಪ್ಪ ಸವರಿದ್ದರು. ಎಲ್ಲಾ ತೆಲುಗು ಹುಡುಗರಂತೆ ವೆಂಕಯ್ಯನಿಗೂ ವಿದೇಶಕ್ಕೆ ಹೋಗುವ ವಿಪರೀತ ಹುಚ್ಚಿತ್ತು. ಆ ಕಾರಣಕ್ಕಾಗಿಯೇ ಎಲ್ಲವನ್ನೂ ಸಹಿಸಿಕೊಂಡು ದಿನದೂಡಿದ್ದ. ವರ್ಷಗಳು ಕಳೆದರೂ ಕಂಪೆನಿಯ ಹಿರಿಯರು ಅವನ ವಿದೇಶದ ಕನಸನ್ನು ನನಸಾಗಿಸುವುದರಲ್ಲಿ ಸಹಕರಿಸಿರಲಿಲ್ಲ. ಹಲವು ಬಾರಿ ಕಂಪೆನಿಯ ಮುಖ್ಯಸ್ಥರಿಗೆ ಅವನು ನಿವೇದನೆ ಮಾಡಿಕೊಂಡಿದ್ದರೂ, ಅವರು ಏನೋ ನೆಪ ಹೇಳಿ ತಳ್ಳುತ್ತಲೇ ಹೋಗಿದ್ದರು. ರೋಸಿ ಹೋದ ಅವನು ಹೊಸ ಉದ್ಯೋಗವನ್ನು ಹುಡುಕಿಕೊಂಡು ನಮ್ಮ ಕಂಪೆನಿಯ ಸಂದರ್ಶನಕ್ಕೆ ಬಂದಿದ್ದ. ಅವನ ಎಂಜನಿಯರಿಂಗ್ ಪದವಿಯ ವಿಪರೀತ ಕಡಿಮೆ ಅಂಕಗಳು ಸಾಕಷ್ಟು ದೊಡ್ಡ ಕಂಪೆನಿಯ ಹೊಸ್ತಿಲನ್ನು ದಾಟುವುದಕ್ಕೆ ಅವನನ್ನು ಬಿಟ್ಟಿರಲಿಲ್ಲ. ಆರಂಭದ ತಾಂತ್ರಿಕ ಸಂದರ್ಶನವನ್ನು ನನ್ನ ಕಿರಿಯ ಸಹೋದ್ಯೋಗಿಗಳೇ ನಡೆಸಿ, ಕೊನೆಯ ಸುತ್ತಿನ 'ಅಂತಿಮ ಆಯ್ಕೆ'ಯ ಸಂದರ್ಶನಕ್ಕೆ ನನ್ನ ಬಳಿಗೆ ಅವನನ್ನು ಕಳುಹಿಸಿದ್ದರು.

ವೆಂಕಯ್ಯನ ಮಾತಿನ ಖಚಿತತೆ ನನಗೆ ಸಂದರ್ಶನದಲ್ಲಿ ಬಹಳ ಇಷ್ಟವಾಗಿತ್ತು. ಗೊತ್ತಿದ್ದನ್ನು ಹೆಮ್ಮೆಯಿಂದ ಹೇಳುವಷ್ಟೇ ಗೊತ್ತಿಲ್ಲದ್ದನ್ನು 'ಗೊತ್ತಿಲ್ಲ' ಎಂದು ಅಳುಕಿಲ್ಲದೆ ಹೇಳುವ ಅವನ ಸ್ವಭಾವ ನನಗೆ ವಿಶೇಷವೆನ್ನಿಸಿತ್ತು. ಅಂತಹ ವರ್ತನೆ ಪ್ರಬುದ್ಧತೆಯಿಂದ ಮಾತ್ರ ದಕ್ಕುತ್ತದೆ. 'ನನಗೆ ಗೊತ್ತಿಲ್ಲ' ಎಂದು ಹೇಳುವುದು ಅತ್ಯಂತ ಸಂಕಷ್ಟದ ಕೆಲಸ. ವಿಪರೀತ ಮುಜುಗರದಿಂದ ಆ ಮಾತನ್ನು ನಾವು ಹೇಳುತ್ತೇವೆ. ಎಲ್ಲಾ ಸಂಗತಿಗಳು ಎಲ್ಲರಿಗೂ ಗೊತ್ತಿರಲೇ ಬೇಕಿಲ್ಲ ಎನ್ನುವುದು ನಮಗೆ ಮನದಟ್ಟಾದರೆ, ಅಂತಹ ಮುಜುಗರದಿಂದ ಹೊರಬರುತ್ತೇವೆ. ನನ್ನ ಅನುಭವಕ್ಕೆ ತಕ್ಕಂತೆ ಸಾಕಷ್ಟು ಸಂಗತಿಗಳು ಸ್ಪಷ್ಟವಾಗಿ ನನಗೆ ಗೊತ್ತಿವೆ ಎನ್ನುವ ಧೈರ್ಯವೂ ನಮ್ಮೊಡನೆ ಇದ್ದಾಗ ಮಾತ್ರ, ತಿಳಿಯದ ವಿಷಯಗಳಿಗೆ 'ಗೊತ್ತಿಲ್ಲ' ಎಂದು ಅಳುಕಿಲ್ಲದೆ ಹೇಳುವುದು ಸಾಧ್ಯವಾಗುತ್ತದೆ. ಅದೇ ಕಾರಣಕ್ಕಾಗಿಯೇ ಅಂತಹವರು ಗೊತ್ತಿರುವ ವಿಷಯಗಳನ್ನು ಬಹಳ ಸ್ಪಷ್ಟವಾಗಿ ಮತ್ತು ಕರಾರುವಾಕ್ಕಾಗಿ ವಿವರಿಸುತ್ತಾರೆ. ಅವರ ಭಾಷೆ ಮತ್ತು ನಿರೂಪಣಾ ಶಕ್ತಿಗಿಂತಲೂ ಹೆಚ್ಚಾಗಿ,